ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 01/03/2020

# ಅಧಿವೇಶನ ವೇಳೆ ಕೇರಳ ಶಾಸಕರು ಸ್ಪೀಕರ್ ಜತೆ ಚಾಟ್ ಮಾಡಬಹುದು!

ತಿರುವನಂತಪುರಂ: ಕೇರಳ ವಿಧಾನಸಭೆಯನ್ನು ಡಿಜಿಟಲೀಕರಣಗೊಳಿಸಲಾಗಿದ್ದು, ಸದಸ್ಯರು ನೇರವಾಗಿ ಸ್ಪೀಕರ್ ಜತೆ ಚಾಟಿಂಗ್ ಮಾಡುವ ಅವಕಾಶ ಕಲ್ಪಿಸಲಾಗಿದೆ. ಆ ಮೂಲಕ ಚಾಟಿಂಗ್ ತಂತ್ರಜ್ಞಾನ ಅಳವಡಿಸಿಕೊಂಡ ದೇಶದ ಮೊದಲ ರಾಜ್ಯ ಎಂಬ ಖ್ಯಾತಿಗೆ ಕೇರಳ ಪಾತ್ರವಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಕೇರಳ ವಿಧಾನಸಭೆಸ್ಪೀಕರ್‌ಶ್ರೀರಾಮಕೃಷ್ಣನ್,ವಿಧಾನಸಭೆಯಲ್ಲಿ ಇನ್ನು ಎಲ್ಲ ಮಾಹಿತಿಯೂ ಬೆರಳ ತುದಿಯಲ್ಲೇ ಸಿಗಲಿವೆ. ಸದನ ನಡೆಯುತ್ತಿರುವಾಗ ಎಲ್ಲಾ 140 ಸದಸ್ಯರು ನನ್ನ ಜತೆ ಚಾಟ್ ಮಾಡಬಹುದು. ಆದರೆ ಇದಕ್ಕೆ ತಾವು ಅವಕಾಶ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.